ಇ) ಕೆಲವು ವೃತ್ತಿಗಳಿಗೆ ಈಗಾಗಲೇ ಸಂಯೋಜನೆ ಪಡೆಯಲಾಗಿದೆ. ಉಳಿದ ವೃತ್ತಿಗಳಿಗೆ ಸಂಯೋಜನೆ ಪಡೆಯಲು ಕ್ರಮಕೈಗೊಳ್ಳಲಾಗಿದೆ.

ಈ) 10 ಹೊಸ ಐಟಿಐಗಳಿಗೆ ಅಗತ್ಯವಾದ ಕನಿಷ್ಠ ಹುದ್ದೆಗಳನ್ನು ಸೃಜಿಸಲು ಸರ್ಕಾರವು ಮಂಜೂರಾತಿ ನೀಡಿದೆ. ಪ್ರಸ್ತುತ ಇತರೆ ಸರ್ಕಾರಿ ಐಟಿಐಗಳಿಂದ ಸಿಬ್ಬಂದಿ ನಿಯೋಜನೆ ಹಾಗೂ ಅತಿಥಿ ಬೋಧಕರ ಸೇವೆ ಬಳಸಿಕೊಂಡು ತರಬೇತಿ ನೀಡಲಾಗುತ್ತಿದೆ. ಸಿಬ್ಬಂದಿಗಳ ವಿವರಗಳನ್ನು ಅನುಬಂಧ–1ರಲ್ಲಿ ಒದಗಿಸಲಾಗಿದೆ.

ಅನುಬಂಧ - 1

ಕ್ರ. ಸಂ.	ಹೊಸ ಕೈಗಾಲಿಕಾ ತರಬೇತಿ ಸಂಸ್ಥೆಯ ಹೆಸರು	ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಹೆಸರು (ಶ್ರೀಮತಿ/ಶ್ರೀ)	ಅತಿಥಿ ಬೋಧಕರ ಸಂಖ್ಯೆ
1	ಹೊಸಕೋಟೆ	11	13
2	ಗುಡಿಬಂಡೆ	5	8
3	ಕೊರಟಗೆರೆ	4	12
4	ಸೊರಬ	2	9
5	ಸಾಗರ	3	17
6	ಕೊಪ್ಪ (ಶೃಂಗೇರಿ)	2	8
7	ಹುಬ್ಬಳ್ಳಿ-ಧಾರವಾಡ	7	10
8	ಶಿಗ್ಗಾಂವ್	3	15
9	ಅಂಕೋಲ	3	13
10	ಸಿದ್ದಾಪುರ	3	14

ಶಾಶ್ವತ ಕುಡಿಯುವ ನೀರು

446 (950) ಶ್ರೀ ವೆಂಕಟಸ್ವಾಮಿ (ದೇವನಹಳ್ಳಿ) :– ಮಾನ್ಯ ಜಲ ಸಂಪನ್ಮೂಲ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ನೇತ್ರಾವತಿ ಹಾಗೂ ಹೇಮಾವತಿ ನದಿಗಳ ನೀರನ್ನು ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಹಾಗೂ ಕೋಲಾರ ಜಿಲ್ಲೆಗಳಿಗೆ ಹರಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ ;

ಆ) ಈ ಜಿಲ್ಲೆಗಳಿಗೆ ಶಾಶ್ವತ ಕುಡಿಯುವ ನೀರಿನ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

ಇ) ಶಾಶ್ವತ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲು ಸರ್ಕಾರಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು ;

ಈ) ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬರುವ ಅನುದಾನ ಎಷ್ಟು ;

ಊ) ಶಾಶ್ವತ ಕುಡಿಯುವ ನೀರಿನ ಕಾಮಗಾರಿಗಳನ್ನು ಎಂದಿನಿಂದ ಕೈಗೊಳ್ಳಲಾಗುವುದು ?

ಶ್ರೀ ಬಸವರಾಜ ಬೊಮ್ಮಾಯಿ (ಮಾನ್ಯ ಜಲ ಸಂಪನ್ಮೂಲ ಸಚಿವರು):–

ಅ) & ಆ) ಪಶ್ಚಿಮಾಭಿಮುಖವಾಗಿ ಹರಿಯುವ ಕೆಲವೊಂದು ಹಳ್ಳಗಳನ್ನು ಮಾತ್ರ ಮಾಲಾ ಕಾಲುವೆ ಮೂಲಕ ಹರಿಸಿ ರಾಜ್ಯದ ಬರಪೀಡಿತ ಜಿಲ್ಲೆಗಳಿಗೆ ಕುಡಿಯುವ ನೀರು ಹಾಗೂ ಕೆರೆಗಳನ್ನು ತುಂಬುವುದರ ಮೂಲಕ ಅಂತರ್ಜಲ ಹೆಚ್ಚಿಸಲು ಶ್ರೀ ಜಿ.ಎಸ್. ಪರಮಶಿವಯ್ಯನವರು ಯೋಜನೆಯನ್ನು ರೂಪಿಸಿರುತ್ತಾರೆ. ಸದರಿ ಯೋಜನೆಯ ಜೊತೆಗೆ ಪಶ್ಚಿಮಾಭಿಮುಖವಾಗಿ ಹರಿಯುವ ಎತ್ತಿನಹೊಳೆ ನದಿಯ ಭಾಗಶಃ ನೀರನ್ನು ಚಿಕ್ಕಬಳ್ಳಾಪುರ, ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ಕುಡಿಯುವ ನೀರಿಗಾಗಿ ಒದಗಿಸುವ ಯೋಜನೆಯ ಕುರಿತು ವಿವರವಾದ ಯೋಜನಾ ವರದಿಯ ತಯಾರಿಕೆಯ ಪ್ರಗತಿಯಲ್ಲಿರುತ್ತದೆ.

ಇ) ಶ್ರೀ ಜಿ.ಎಸ್. ಪರಮಶಿವಯ್ಯನವರು ಪ್ರಸ್ತಾಪಿಸಿರುವ ಯೋಜನೆಯ ಜೊತೆಗೆ ಎತ್ತಿನಹೊಳೆ ಯೋಜನೆಯ ಕುರಿತಂತೆ ವಿವರವಾದ ಯೋಜನಾ ವರದಿಯ ತಯಾರಿಕೆಯ ನಂತರ ಸದರಿ ಯೋಜನೆಗೆ ತಗಲುವ ಅಂದಾಜು ವೆಚ್ಚದ ವಿವರಗಳು ಲಭ್ಯವಾಗುವುವು.

ಈ) ವಿವರವಾದ ಯೋಜನಾ ವರದಿಯ ತಯಾರಿಕೆಯ ನಂತರ ಮುಂದಿನ ಸೂಕ್ತ ಕ್ರಮ ಜರುಗಿಸಲಾಗುವುದು.

ಉ) ವಿವರವಾದ ಯೋಜನಾ ವರದಿಯ ತಯಾರಿಕೆಯ ನಂತರ ಅದನ್ನು ಪರಿಶೀಲಿಸಿ, ಮುಂದಿನ ಸೂಕ್ತ ಕ್ರಮ ಕೈಗೊಳ್ಳಲಾಗುವುದು.